WONDERFUL REMEDY
for all Digestive Troubles
A speciality in gastric ulsers, duedamal ulcers. Radical cure guaranteed. Apply to—
S. Lingai Gowda
Kurubar Street, Kollegal

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Regd No. M. 1299 ವಾರಪತ್ರಿಕೆ ೬ ಕಾಸು

Weekly SATYAVADI Foundcd 1917

ಸತ್ಯವಾದಿ

ಸಂಚಿಕೆ 26) ಶನಿವಾರ 2—1—1943 (ಸಂಪುಟ 82

— ಗುಲ್ಮ —

ಎಲ್ಲಾ ತರಹದ ಜೀರ್ಣಕೋಶದ ವ್ಯಾಧಿಗಳಿಗೆ (ಹೊಟ್ಟೆ ನೋವು, ತೇಗು, ಎದೆ ನೋವು ಎದೆಉರಿ, ಪಕ್ಕಶೂಲೆ, ವಾಂತಿ, ಬಾಯಿ ನೀರು) ಇವುಗಳಿಗೆಲ್ಲಾ ಸಮ್ಮಲ್ಲಿ ಖಾತ್ರಿಯಾದ ಔಷಧಿ ದೊರೆಯುತ್ತದೆ. ಅಪೇಕ್ಷಿಸುವರು ಚಿಹ್ನೆಗಳನ್ನು ಕುರಿತು 0—1—6 ಸ್ಟ್ಯಾಂಪಿನೊಡನೆ ಒರೆಯಿರಿ.

ಎಸ್. ಲಿಂಗೇಗೌಡ,
ಕುರುಬರ ಬೀದಿ, ಕೊಳ್ಳೇಗಾಲ.

ತಾಜಾ ಸಮಾಚಾರ

ನಮ್ಮ ದಿವಾನರಾದ ಪ್ರದಾನ ಶಿರೋಮಣಿ ಎಸ್. ಮಾಧವರಾಯರಿಗೆ ಹೊಸ ವರ್ಷದ ಬಿರುದು ಸಿ. ಪಿ. ಇ. ಬಂದ ದ್ದಕ್ಕಾಗಿ ನಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ರಷ್ಯನರು ಲೂಕಿ ಲೂಕಿಯನ್ನು ಜರ್ಮನಿಯರ ಕೈಯಿಂದ ಕಿತ್ತುಕೊಂಡರು. ಇದು ಒಂದು ವರ್ಷದಿಂದ ಜರ್ಮನಿಯರ ಕೈಲಿತ್ತು.

ಮಿ|| ರೂಸವೆಲ್ಟರ ಜರಲ್ ಜಿರೋ ರವರಿಗೆ ಎಲ್ಲಾ ವಿಧದಲ್ಲಿಯೂ ಸಹಾಯ ಮಾಡುತ್ತೇನೆಂದು ಹೇಳಿದರು.

ನ್ಯೂಬಿಲೆಂಡ್‌ನಲ್ಲಿ ಯುದ್ಧ ಪ್ರಾರಂಭವಾದಾಗ ನೌಕದಲ್ಲಿ 700 ಜನರಿದ್ದರು. ಈಗ 7 00 ಮಾತ್ರ ರುವುದು.

ಪೂರ್ವ ರಣರಂಗದಲ್ಲಿ ಶತ್ರುಗಳ 1 00 ವಿಮಾನಗಳನ್ನು 1942 ರಲ್ಲಿ ಮಿತ್ರ ರಾಷ್ಟ್ರದವರು ಹೊಡೆದು ಹಾಕಿರುವುದು.

ಅಮೇರಿಕಾದಲ್ಲಿ ಈ ವರ್ಷ ದಿಂದ ತಿಂಗಳಿಗೆ 10,000 ವಿಮಾನಗಳನ್ನು ತಯಾರು ಮಾಡುವರು. ಕಳೆದ ವರ್ಷ ತಿಂಗಳಿಗೆ 5,000 ದಂತೆ ತಯಾರು ಮಾಡಿದರು.

ಸುಕ್ಕೂರ್ ಹತ್ತಿರ ಮೂರು ಯುವಕರು ರೈಲ್ವೆ ಕಂಬಿಗಳ ಫಿಷ್‌ಪ್ಲೇಟ್‌ನ್ನು ತೆಗೆಯುತ್ತಿದ್ದರೆಂದು, ಶೂಲಕ್ಕೆ ಹಾಕಬೇಕೆಂದು ಕೋರ್ಟ್ ಆರ್ಡರ್ ಆಗಿದೆ.

ಮದ್ರಾಸ್ ಸರ್ಕಾರದವರು ಕಳ್ಳಿಕಾಯಿ ಎಣ್ಣೆಯಿಂದ ರೈಲ್ವೆ ಇಂಜಿನ್‌ಗಳನ್ನು ನಡಿಸಬಹುದೆಂದು ಪರೀಕ್ಷೆಯಿಂದ ಗೊತ್ತುಮಾಡಿರುವರು.

ಅಮೇರಿಕಾದಲ್ಲಿ 1942 ರಲ್ಲಿ 750 ಹೊಸ ಹಡಗುಗಳನ್ನು ಕಟ್ಟಿಸಿರುತ್ತಾರೆ.

ವರ್ತಮಾನ ಸಂಗ್ರಹ

ಜೈಲಿನಲ್ಲಿರುವ ಮುಖಂಡರನ್ನೆಲ್ಲಾ ಬಿಡಬೇಕೆಂದು ಮಿ|| ಜಿನ್ನಾರವರು ಪ್ರಯತ್ನ ಮಾಡಬೇಕೆಂದು ಫಜಲುಲ್ ಹಕ್ ಹೇಳುತ್ತಾರೆ. ಇವರು ಬಾದ್ ಮುಸ್ಲಿಮ್ ಬೋರ್ಡಿನ ಮೆಂಬರು.

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ವರ್ತಮಾನ ಪತ್ರಿಕೆಗಳು ಕಮಿಷನ್ ಪುಟಗಳಲ್ಲಿ 1-1-43 ರಿಂದ ಅಚ್ಚಾಗುವುವು.

ಮನುಷ್ಯರ ಕೂದಲಿನಿಂದ ಈಗಲೆ ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ಒಟ್ಟೆ ತಯಾರು ಮಾಡುತ್ತಿರುವರು ಜರ್ಮನಿಗುವುದೇ ಕಷ್ಟ. ಮರದಲ್ಲಿ ಮೇಲಿನ ಭಾಗವನ್ನು ಕೆಳಗಿನ ಭಾಗವನ್ನು ಕ್ಯಾನವಾಸ್ ಆಗಿ ತಯಾರು ಮಾಡುವರು.

ಯುದ್ಧಕ್ಕೋಸ್ಕರ ಅಮೇರಿಕಾದವರು 11 940,00 ,000 ಡಾಲರ ಪತ್ರಗಳನ್ನು ಕೊಂಡಿರುವರು.

ಈ ವರ್ಷದಲ್ಲಿ 780 ನೌಕೆಗಳು ಅಮೇರಿಕಾದಲ್ಲಿ ಹೊಸದಾಗಿ ಕಟ್ಟಿದ್ದರು.

ಜವಹರಿಲಾಲ್ ಜೈನ, ಬರ್ಮಪ್ರವಾಸ ಮತ್ತು ಹಾಜ್ ಕಾಲದಲ್ಲಿ ಮೆಕ್ಕ ಈ ಎರಡು ಚಲನ ಚಿತ್ರಿಗಳನ್ನು ಬೀಹಾರಿನಲ್ಲಿ ಎಲ್ಲೂ ಪ್ರದರ್ಶಿಸಬಾರದೆಂದು ಸಂಸ್ಥಾರಿ ಅಪ್ಪಣೆಯಾಗಿದೆ.

ಅಫೀಮನ್ನು ಕುಂಬಳಕಾಯಿಯಲ್ಲಿ ಇಟ್ಟು ತಂದಳೆಂದು ಮದರಾಸಿನಲ್ಲಿ ಶೀಕ್ಕೆ ಗೊಳಗಾದರು.

ಅಹಮದಾಬಾದಿನಲ್ಲಿ ಇದುವರಿಗೂ ಇದ್ದ ಪದ್ಧತಿಯನ್ನು ಬ್ಲಾಕ್ ಔಟ್ ಜಾರಿಗೆ ತಂದಿರುತ್ತಾರೆ.

ಸಿಂದ್ ಪ್ರವಾಹದಲ್ಲಿ ನೊಂದವರಿಗೆ ಭೂಪಾಲ್ ನವಾಬರು ಇಪ್ಪತ್ತು ಸಾವಿರ ರೂಪಾಯಿ ಕೊಟ್ಟಿರುತ್ತಾರೆ.

ಇಂಡಿಯಾದ ಮೇಲೆ ಹೆಚ್ಚು ಧಾಳಿ ಆಗಲಾರದು

ಜಪಾನಿಯರು ಹೆಚ್ಚು ಹೆಚ್ಚಾಗಿ ಇಂಡಿಯಾದಲ್ಲಿ ಧಾಳಿ ಮಾಡಲು ಆಗುವುದಿಲ್ಲ. ಅಮೇರಿಕಾದವರ ವಿಮಾನಗಳು ಬಹಳ ಜಲವುಳ್ಳದ್ದು. ಈಗ ಎಲ್ಲಲ್ಲೂ ಜಪಾನಿ ವಿಮಾನಗಳಿಗೆ ಅಮೇರಿಕಾ ವಿಮಾನಗಳು ಮೇಲಾಕುತ್ತಿರುವುವು. ಜಪಾನಿಯರಿಗೆ ಸಾಲಮನ್ ದಲ್ಲಿ ಐದು ತಿಂಗಳಲ್ಲಿ 667 ವಿಮಾನಗಳು ನಷ್ಟವಾಗಿದೆ, ಅಂದರೆ ತಿಂಗಳಿಗೆ 100 ನಷ್ಟವಾದಂತಾಯಿತು. ಜಪಾನರು ಈಗ ತಿಂಗಳಿಗೆ 325 ವಿಮಾನಗಳನ್ನು ತಯಾರಿಸುತ್ತಿರುವರು. ಜೈನ ಅಮೆರಿಕಾದವ ಒಂದು ವಿಮಾನ ನಷ್ಟಕ್ಕೆ ಜಪಾನರಿಗೆ 12 ರಂತೆ ನಷ್ಟವಾಗುತ್ತದೆ.

ಡಿಸೆಂಟಿನಲ್ ಡಾ
ಆಮಶಂಕೆ
ಅತಿಸಾರಕ್ಕೆ
ಸಂಜೀವನ
ಪ್ಯಾಕೆಟ್ ಒಂದಕ್ಕೆ ೨ ಆಣೆ
ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ

ಶ್ರೀ 'ಓಂ' ಬ್ರಾಂಡ್ ಕೇಸರಿ

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾಗಿದ್ದು ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ಅಪೆರಾ
1-1-43 ರಿಂದ
ಕಿಸಿಸೆನಕಹನ
ಲೀಲ ಚಿಟ್ನಿಸ್
ಪಹಾರಿಸನ್ಯಾಲ್
ಪಾತ್ರವಹಿಸಿರುವರು

ಅಹಂಬ್ರಹ್ಮ

— ಬರೆದವನು —
"ನಾನು"

೩. ನಾನು ಯಾರು ?

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನಾನು ! ಈ ಎರಡಕ್ಷರಗಳನ್ನು ಉಚ್ಚರಿಸಲು ಎರಡು ಕ್ಷಣಗಳು ಸಹ ಬೇಕಿಲ್ಲ. ಆದರೆ ಇದರ ವರ್ಣನೆಯನ್ನು ಎರಡು ಯುಗಗಳವರೆಗೆ ಮಾಡಿದರೂ ಮುಗಿಯುವಂತಿಲ್ಲ.

ನಾನು ಯಾರು ? ನನ್ನ ಗುಣಗಳೇನು ? ನನ್ನ ಸ್ವರೂಪವೇನು ? ಯಾರಾದರೂ ನನ್ನನ್ನು ನೋಡಿದ್ದಾರೆಯೇ ? ಓಹೋ ನೋಡಿದ್ದಾರೆ ; ನೋಡುತ್ತಲೂ ಇದ್ದಾರೆ.

ನಾನು 'ಅಹಂಬ್ರಹ್ಮ' ನು ! ಸಮಸ್ತ ಕಲ್ಯಾಣಗುಣಪರಿಪೂರ್ಣನು ! ಅಖಂಡಾನಂದ ಸ್ವರೂಪನು ! ನನ್ನನ್ನು ಅರಿಯಲೆಂದೆ ನಾನು ಎಷ್ಟೋ ಸಾವಿ ಎಷ್ಟೋ ರೂಪಗಳಲ್ಲಿ ಎಷ್ಟೋ ರೀತಿಗಳಿಂದ ಹೇಳುತ್ತಲೇ ಒಂದಿರುವೆನು. ಆದರೇನು ? ನನ್ನನ್ನು ಅರಿತು ಮರೆಯುವವರೇ ಒಹಳು !

ಈ ಭೂಮಂಡಲದಲ್ಲಿ ಪ್ರತಿಯೊಂದು ಪದಾರ್ಥವೂ, ಪ್ರತಿಯೊಂದು ಪ್ರಾಣಿಯೂ ಒಂದನ್ನೊಂದು ಅವಲಂಬಿಸಿಕೊಂಡೇ ಇರಬೇಕು. ನಿನ್ನವಟ್ಟಿಗೆ ನೀನು ಪ್ರತ್ಯೇಕವಾದ. ಸ್ವತಂತ್ರವಾದ ವ್ಯಕ್ತಿಯಂತೆಯೇ ಇದ್ದರೂ, ಪರಾಶ್ರಯವಿಲ್ಲದೆ ನಿನ್ನ ಜೀವನಯಾತ್ರೆಯು ಸಾಗುವಂತೆಯೇ ಇಲ್ಲ.

ಹಸಿವಿಗೆ ಆಹಾರವು ಬೇಕು ; ಜಾಯಾಪಕೆಗೆ ನೀರು ಬೇಕು ; ಉಸಿರಾಡಲು ಗಾಳಿಯು ಬೇಕು ; ಶರೀರಕ್ಕೆ ಶೃಂಗಾರ ಬೇಕು ; ಇಂದ್ರಿಯ ತೃಪ್ತಿಗಾಗಿ ಭೋಗಗಳು ಬೇಕು ; ಉಪಭೋಗಿಸಲು ಐಶ್ವರ್ಯವು ಬೇಕು ; ರಮಿಸಲು ರಮಣಿಯು ಬೇಕು ; ಆಲಿಸಲು ಮಕ್ಕಳು ಬೇಕು ; ವಾಸಿಸಲು ಮನೆಯು ಬೇಕು.

ಬೆಳೆಗೆ ಭೂಮಿಯೇ ಆಧಾರ ; ಮಳೆಗೆ ಸಾಗರವೇ ಆಧಾರ ; ಬೆಳಕಿಗೆ ಸೂರ್ಯನೇ ಆಧಾರ ; ಉಸಿರಿಗೆ ಗಾಳಿಯೇ ಆಧಾರ ; ಮಾನವನಿಗೆ ಪಂಚಭೂತಗಳೇ ಆಧಾರ : ಇವೆಲ್ಲಕ್ಕೂ **ನಾನೇ** ಆಧಾರ !

ನನ್ನ ಚೈತನ್ಯವಿಲ್ಲದೆ ವಾಯುವು ಬೀಸಲಾರದು ; ನನ್ನ ಚೈತನ್ಯವಿಲ್ಲದೆ ನೀನು ಜೀವಿಸಲಾರೆ ; ನನ್ನ ಚೈತನ್ಯವಿಲ್ಲದೆ ಹುಲ್ಲುಕಡ್ಡಿಯೂ ಚಲಿಸಲಾರದು ನನ್ನ ಚೈತನ್ಯದಿಂದಲೇ ಸೃಷ್ಟಿ !

ನಿನ್ನಲ್ಲಿ ಸುಖಿಸುವೆನು : ಅವನಲ್ಲಿ ದುಃಖಿಸುವೆನು ; ನಿನ್ನಲ್ಲಿ ಮೆಚ್ಚಿಯುವೆನು ; ಅವನಲ್ಲಿ ಕೊರಗುವೆನು ; ನಿನ್ನಲ್ಲಿ ನಗುವೆನು ; ಅವನಲ್ಲಿ ಅಳುವೆನು ; ನಿನ್ನಲ್ಲಿ ಕೊಡುವೆನು ; ಅವನಲ್ಲಿ ಬೇಡುವೆನು ; ನಿನ್ನಲ್ಲಿ ಹೇಳುವೆನು ; ಅವನಲ್ಲಿ ಕೇಳುವೆನು. ಈ ಕಪಟ ನಾಟಕದ ಏಚಾರ್ಯ ನಾನು !

ಆದಿಯಲ್ಲಿ ನಾನೊಬ್ಬನೇ ಇದ್ದೆನು. ಕೇವಲ 'ಓಂ' ಕಾರವೆಂಬ ನಾಮದಲ್ಲಿ ಅಡಗಿಕೊಂಡು, ನನ್ನನ್ನೇ ನಾನು ಮನನಮಾಡುತ್ತಾ ಯೋಗನಿದ್ರೆಯಲ್ಲಿರುವಾಗ ಇದ್ದಕ್ಕಿದ್ದಹಾಗೆಯೇ ನನ್ನಲ್ಲಿ ಅಸೆಯು ಹುಟ್ಟಿತು. ಆ ಅಸೆಯೇ ಸೃಷ್ಟಿಗೆ ಕಾರಣವಾಯಿತು. ಅಸೆಯಿಂದ ಗುಣಗಳೂ, ಗುಣಗಳಿಂದ ವರ್ಣಗಳೂ ಹುಟ್ಟಿದವು. ಗುಣವರ್ಣಗಳ ಭೇದವು ಬೆಳೆದಂತೆಲ್ಲಾ ಸೃಷ್ಟಿಯೂ ಬೆಳೆಯಿತು.

ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾದ ಬೀಜವು ಮೊಳೆತು ಸಸಿಯಾಗಿ ಶಾಖೋಪಶಾಖೆಗಳಿಂದ ಕೂಡಿದ ದೊಡ್ಡ ವೃಕ್ಷವಾಗುವಂತೆ, ನನ್ನಲ್ಲಿ ಹುಟ್ಟಿದ ಅಸೆಯು ಮೊಳೆತು ಸಸಿಯಾಗಿ ಈಗಲೇ ಬ್ರಂಹ್ಮಾಂಡವಾಗಿರುವುದು ಖಚಿತ. ಧರ್ಮವನ್ನು ಸುಸರಿಸಿ ಮರದ ಎಲೆಗಳು ಉದುರಿ ಹುಟ್ಟುತ್ತಿರುವಂತೆ ಭೂಮಿಯಲ್ಲಿ ಜೀವಿಂತಿಯು ಹುಟ್ಟಿ ಸಾಯುತ್ತಲೇ ಇರುವುದು. ಸಹಸ್ರಾರು ಶಾಖೋಪಶಾಖೆಗಳಲ್ಲಿ, ಅಸಂಖ್ಯಾತಗಳಾದ ಎಲೆ ಹೂ, ಕಾಯಿ, ಹಣ್ಣುಗಳು ತುಂಬಿದ್ದರೂ ಅವೆಲ್ಲಕ್ಕೂ ಒಂದೇ ಬುಡವು ಆಧಾರವಾಗಿರುವಂತೆ, ನನ್ನಲ್ಲಿ ಹುಟ್ಟಿಬೆಳೆದಿರುವ ಈ ಸೃಷ್ಟಿಯು ಪ್ರತಿಯೊಂದು ಜೀವರಾಶಿಗೂ ನಾನೇ ಆಧಾರನಾಗಿರುವೆನು. ಎಲೆಗಳು ಉದುರುತ್ತಲೇ ಇದ್ದರೂ, ಮರವು ಇದ್ದಂತೆಯೇ ಇರುವಂತೆ, ಜೀವಕೋಟಿಯು ಹುಟ್ಟಿ ಸಾಯುತ್ತಲೇ ಇದ್ದರೂ, ನಾನು ಇದ್ದಂತೆಯೇ ಇರುವೆನು. ಬೀಜಗಳು ಒಂದಾದ ಒಂದರಂತೆ ಬೇರೆಬೇರೆಯಾಗಿ ಎಷ್ಟೋ ಸಾರಿ ಹುಟ್ಟಿದರೂ, ಅದರ ಗುಣವು ಮೊದಲಿನಂತೆಯೇ ಪರಿಪೂರ್ಣವಾಗಿ ಇದ್ದೇ ಇರುವಂತೆ ಸೃಷ್ಟಿಗೆ ಕಾರಣವಾದ ಅಸೆಯು ಪ್ರತಿಯೊಂದು ಜೀವರಾಶಿಯಲ್ಲಿಯೂ ಪರಿಪೂರ್ಣವಾಗಿ ಇದ್ದೇ ಇರುವುದು.

ಅಸೆಗೆ ಕೊನೆಯಿಲ್ಲ. ಅಸೆಯು ನಾಶವಾದಲ್ಲದೆ ನನ್ನೆ ಅರಿವಾಗಲಾರದು. ಆದುದರಿಂದಲೆ ಅಸೆಗೆ 'ಪಾಶ' ವೆಂದು ಹೇಳುವರು.

ಎಲ್ಲೆಲ್ಲಿಯೂ ನಾನಿರುವೆನು ; ಆದುದರಿಂದ ಎಲ್ಲವನ್ನು ನಾನು ತಿಳಿಯುವೆನು. ಎಲ್ಲರಲ್ಲಿಯೂ ನಾನಿರುವೆನು : ಆದುದರಿಂದ ಎಲ್ಲರೂ ನನ್ನ ಅಧೀನದವರಾಗಿರುವರು : ಎಲ್ಲರ ಮನಸ್ಸಿನಲ್ಲೂ ನಾನೇ ಇರುವೆನು. ಆದುದರಿಂದ ಎಲ್ಲ ಭಾವನೆಗಳ ಪ್ರೇರಕನೂ ನಾನಾಗಿರುವೆನು. ಜೀವ ಕೋಟಿಯು ಭಿನ್ನ ಭಿನ್ನ ಗುಣಗಳಾದ ಗುಣ ಕರ್ಮ ಸಂಸ್ಕಾರಗಳಿಂದ ಬೇರೆ ಬೇರೆಯಾಗಿರುವದರಿಂದ ಎಲ್ಲರಲ್ಲಿಯೂ ಅಡಗಿರುವ ನಾನು ಅವರವರಲ್ಲಿ ನೆಲೆಸಿರುವ ಸುಗುಣ ದುರ್ಗುಣಗಳಿಗೆ ಅನುಸಾರವಾಗಿ, ಸತ್ಕರ್ಮಾದಿಪುಣ್ಯಕರ್ಮಗಳನ್ನು ಮಾಡಿಸುತ್ತಾ, ಲೀಲಾ ವಿಭೂತಿಯಾಗಿ ನಲಿಯುತ್ತಿರುವೆನು !

(ಮುಂದುವರಿಯುವುದು.)

ಸೂಚನೆ : ಈ ಲೇಖನದ ಸರ್ವಸ್ವಾಮಿತ್ವವೂ ಪ್ರೇರಕನಿಗೆ ಸೇರಿದೆ, 'ಸತ್ಯವಾದಿ' ಪತ್ರಿಕಾಕರ್ತರ ಮುಖಾಂತರ ಬರೆದವರ ಅನುಮತಿಯನ್ನು ಪಡೆಯದೆ, ಯಾರೂ ಇದನ್ನು ಪ್ರಕಟಿಸಬಾರದು; ಮತ್ತು ಇತರ ಭಾಷೆಗಳಿಗೆ ತರ್ಜುಮೆಯನ್ನೂ ಮಾಡಬಾರದು.

"ನಾನು ಯಾರು?"

ಮುಂದಿನ ವಾರ ಮುಂದುವರಿಯುವುದು. **ತಪ್ಪದೇ ಓದಿರಿ !**

ವಿವಿಧ ವಿಷಯಗಳು

ಲಾರ್ಡ್ ಲಿನ್‌ಲಿಥ್‌ಗೋರನರ ಅವಧಿಯನ್ನು ಹೆಚ್ಚಿಸಿದ್ದನ್ನು "ಡಾನ್" ಪತ್ರಿಕೆಯು ಟೀಕಿಸಿದೆ. ಭಾರತ ರಾಜಕೀಯ ರಂಗದಲ್ಲಿದ್ದ ರೋಗ ನಿವಾರಣೆಗೆ ಮತ್ತೆ ಹಳೇ ಔಷಧವನ್ನೇ ಹಾಕಿತಲ್ಲಾ ಎಂದು ವಿಮರ್ಶಿಸಿದೆ.

ಯುದ್ಧ ಮುಗಿದನಂತರ ಪ್ರಪಂಚಸ್ಥಿತಿಯು ಯಾವ ರೀತಿ ಇರಬೇಕೆಂದು ಈಗಲೇ ಮಿತ್ರರಾಷ್ಟ್ರಗಳು ತೀರ್ಮಾನಮಾಡಬೇಕೆಂದು ಅಮೇರಿಕಾದಲ್ಲಿ ಶೇಕಡ 73 ಮಂದಿಯು ಅಭಿಪ್ರಾಯಪಟ್ಟಿರುವರು.

ಫ್ರೆಂಚ್ ಸೋಮಾಲಿಲ್ಯಾಂಡು ಕೂಡ ಮಿತ್ರಪಕ್ಷದ ಕಡೆಗೆ ಸೇರುವ ಸಂಭವವಿರುವುದಾಗಿ ತಿಳಿಯಬಂದಿದೆ

ಬೆಂಗಳೂರು ನಗರದಲ್ಲಿ ಮುಖ್ಯ ಆಹಾರ ಪದಾರ್ಥಗಳ ರೇಷನಿಂಗ್ ಜನವರಿ 15 ರಿಂದ ಜಾರಿಗೆ ಬರುವುದೆಂದು ತಿಳಿಯಬಂದಿದೆ.

ಸ್ಟಾಲಿನ್‌ಗ್ರಾಡಿನ ವಾಯುವ್ಯದಲ್ಲಿಬೋನಿನಲ್ಲಿ ಸಿಕ್ಕಿಬಿದ್ದಂತಿರುವ ಜರ್ಮನ್ ಸೈನಿಕರ ಕಷ್ಟನಿವಾರಣೆಗಾಗಿ ಬಂದಿದ್ದ ಆರು ಜರ್ಮನ್ ದಳಗಳು ಕೋಟಲ್‌ನಿಕೋವಾ ಕಡೆ ಮಾಪಸ್ಸಾಗಿವೆ.

ಎಲ್ಲಾ ಕಡೆಯಲ್ಲೂ ರಷ್ಯನರು ಜಯಶಾಲಿಗಳಾಗಿದ್ದಾರೆ. ರಷ್ಯಾ ಸೈನ್ಯವು ಮಿಲರೋವನ್ನು ಸುತ್ತುಗಟ್ಟಿದೆ. ಒಂದು ಸೈನ್ಯವು ಪಟ್ಟಣಪ್ರವೇಶಿಸಿದೆ.

ಪಾಕಿಸ್ತಾನವನ್ನು ಪ್ರತಿಭಟಿಸಬೇಕೆಂದು, ಕಾನ್ಪುರದಲ್ಲಿ ನಡೆದ ಹಿಂದೂ ಮಹಾಸಭೆಯ 24 ನೇ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ ಶ್ರೀ ಸವಾರ್ಕರರು ತಿಳಿಯಪಡಿಸಿರುವರು.

ಗುಜರಾತಿನಲ್ಲಿಲ್ಲಾ ನಿರುದ್ಯೋಗ ಚಳವಳಿ ನಡೆಸಲು ಕಾರಣಭೂತರೆಂಬ ಆಪಾದನೆ ಮೇಲೆ ಅಳಿ ಮುಂದಿ ದಸ್ತಗಿರಿಮಾಡಲ್ಪಟ್ಟಿದ್ದಾರೆ.

ಹಾಲು ಪಾನೀಯಗಳು
ನಮ್ಮಲ್ಲಿ ಒಂದು ವಿಶೇಷವೆನ್ನಿ

ಕೆನೆ, ಬೆಣ್ಣೆ, ಆತ ಮಧುರವಾದ ಕ್ರೀಮ್, ಇವುಗಳಿಗೆ
ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ

ಸಿಟಿಸನ್ನಿ ಡೈರಿ ಟೆಲಿಫೋನ್ ನಂಬರು 492
ಹಳೇಪೋಸ್ಟಾಫೀಸ್‌ರಸ್ತೆ, ಮೈಸೂರು

ರಷ್ಯವನ್ನು ಗೆಲ್ಲಲು ಯಾರಿಂದಲೂ ಆಗುವುದಿಲ್ಲ !

(ಬರೆದವರು — ಗೋಪಿಬಾಯಿ)

ಯಾರಾದರೂ ಯೂರೋಪಿಯನ್ನರು ರಷ್ಯಾ ದೇಶವನ್ನು ನೋಡಿದರೆ,— ಅಬ್ಬಬ್ಬಾ ಜರ್ಮನಿಯವರು ಎಷ್ಟು ಭಾಗವನ್ನು ಆಕ್ರಮಿಸಿಕೊಂಡಿರುವರು ಎನ್ನುವರು. - ಆದರೆ ನಿಜ ಸ್ಥಿತಿ ಹಾಗಿರುವುದಿಲ್ಲ.

ಯುಕರೇನ್, ರೋಸ್ಟಾವಿನಲ್ಲಿದ್ದ ಕಾರ್ಖಾನೆಗಳೆಲ್ಲಾ ಯೂರಲ್ ಬೆಟ್ಟದ ಕಡೆ, ಸೈಬೀರಿಯಾ ದೇಶದಲ್ಲಿ ಭರವಾಗಿ ಕೆಲಸಮಾಡುತ್ತಿವೆ. ಯೂರಲ್ ಪರ್ವತದಲ್ಲೂ ಇದಕ್ಕೆ ಸಮೀಪದಲ್ಲಿರುವ ಪ್ರದೇಶದಲ್ಲೂ ಹೇರಳವಾಗಿ ಗಣಿಗಳಿವೆ. ರಷ್ಯಾದಲ್ಲಿ ರೈಲಿನಲ್ಲಿ ಸಾಮಾನನ್ನು ಸಾಗಿಸುವುದು ಬಹು ಸುಲಭ. ರಷ್ಯಾದ ರೈತರೆಲ್ಲಾ ವಿದ್ಯುಚ್ಛಕ್ತಿಯಿಂದ ವ್ಯವಸಾಯ ಮಾಡುವರು. ಇಲ್ಲಿ ಇದ್ದಲು ಕಬ್ಬಿಣ ಹತ್ತಿರಕಾತ್ತಿರದಲ್ಲೇ ಸಿಗುವುದು. ಇಲ್ಲಿ ಸಿಕ್ಕುವ ಕಲ್ಲಿದ್ದಲು ಗಟ್ಟಿಯಾಗಿಯೂ ದೊಡ್ಡದಾಗಿಯೂ ಇರುವುದು. ಇದ್ದಲು ಸಿಕ್ಕಲು ನೆಲವನ್ನು ಬಹಳವಾಗಿ ತೋಡಬೇಕಾಗಿಲ್ಲ. ನದಿಯ ನೀರು ರಭಸವಾಗಿ ಹರಿಯುವುದರಿಂದ ವಿದ್ಯುಚ್ಛಕ್ತಿಯನ್ನು ಸುಲಭವಾಗಿ ತಯಾರಿಸುವರು. ಯುದ್ಧಕ್ಕೆ ಮುಂಚೆ ಪ್ರಪಂಚಕ್ಕೆ ಯೂರಲ್ ಸೈಬೀರಿಯಾ ವಿಷಯ ಹೆಚ್ಚು ತಿಳಿದಿರಲಿಲ್ಲ, ಮತ್ತು ತಿಳಿದುಕೊಳ್ಳಲು ಯಾರೂ ಕುತೂಹಲಪಡುತ್ತಿರಲಿಲ್ಲ. ಸರ್ಕಾರದವರು ಜನರನ್ನು ಮಾಸ್ಕೋವಿನಿಂದ ವ್ಲಾಡಿವೋಸ್ಟಾಕಿಗೆ ಕಳುಹಿಸುತ್ತಿದ್ದರು. ಮಧ್ಯದಲ್ಲಿ ಇಳಿಯುವುದಕ್ಕೆ ಆಸ್ಪದ ಕೊಡುತ್ತಿರಲಿಲ್ಲ. ಯೂರೋಪಿನವರು ರಷ್ಯಾವನ್ನು ನೋಡಿ ಮರುಳಾಗುವಂತೆ ಮಾಡುತ್ತಿದ್ದರು.

ಈಗ ನೋಡಿ ಸ್ಟಾಲಿನ್‌ಸ್ಕ್ ಪಟ್ಟಣವನ್ನು, ಇದನ್ನು ಈಗ ಎರಡನೆ ಖಾರ್ಕೋ ಎನ್ನಬಹುದು. ಇಲ್ಲಿಯವ ಕೂಲಿಗಾರರ ಮನೆಗಳು ಗಾಳಿ ಬೆಳಕಿನಿಂದ ವಿಶಾಲವಾಗಿದೆ. ನೂತನ ವಿಧದಲ್ಲಿ ಕಕ್ಕಸ್ಸುಗಳನ್ನು ಕಟ್ಟಿರುತ್ತಾರೆ. ವಿರಾಮ ಕಾಲದಲ್ಲಿ ಪಾರ್ಕುಗಳಲ್ಲಿ ಕೂತು ಸಂಗೀತ ಕೇಳಲು ರೇಡಿಯೋ ಏರ್ಪಾಡು ಮಾಡಿರುತ್ತಾರೆ. ಪಾಠಶಾಲೆಯಲ್ಲಿ ಕೂಲಿಗಾರರ ಮಕ್ಕಳು ಕಾರ್ಖಾನೆಯ ಕೆಲಸಗಳಿಗೆ ತರ್ಬೇತು ಮಾಡುತ್ತಾರೆ. ಈ ದೇಶದಲ್ಲಿ ಗಂಡಸರು, ಹೆಂಗಸರು, ಮಕ್ಕಳು ಎನ್ನುವ ಭಾವನೆಯೇ ಇಲ್ಲ. ಎಲ್ಲರೂ ಒಂದೇ ಕಡೆ ಕೆಲಸ ಮಾಡುವರು, ರೈಲಿನಲ್ಲಿ ಪ್ರಯಾಣ ಮಾಡುವಾಗ ಆಹಾರ ಪದಾರ್ಥಗಳನ್ನು ಡಬ್ಬಿಗಳಲ್ಲಿ ತುಂಬಿಕೊಂಡು ಪ್ರಯಾಣಮಾಡುತ್ತಿದ್ದರು. ಈಗ ನೋಡಿ ರೈಲಿನಲ್ಲಿ ಕೂತ ಕೂಡಲೆ ಟೀ ಕೊಡುವರು. ಕೈ ತೊಳೆಯಲು ಬಿಸಿನೀರು ಕೊಡುತ್ತಾರೆ ಊಟಕ್ಕೆ ಒಗೆ ಬಗೆಯಾದ ಕಣ್ಣನ್ನು ಕೊಡುವರು. ರೈಲಿನಲ್ಲಿ ಕೂತು ಬೇಜಾರಾದರೆ ಒಂದು ಗಾಡಿಯಿಂದ ಇನ್ನೊಂದು ಗಾಡಿಗೆ ಸಂಚಾರಮಾಡಿ ಹೋಗಬಹುದು. ಅಂದರೆ ಇಂಜನಿಂದ ಗಾರ್ಡ್ ಗಾಡಿಯವರೆಗೂ ಶತಪಥ ತಿರಗಬಹುದು ಊಟಕ್ಕಿಂತ ಫಲಾಹಾರವೇ ಹೆಚ್ಚು, ತಿಂದು ಜೀರ್ಣಿಸಿಕೊಳ್ಳುವುದೇ ಕಷ್ಟ... ಕೈಬರಸಿಕೊಳ್ಳಲು ಟವಲ್ಲನ್ನು ರಾತ್ರಿ ಮಲಗಿಕೊಳ್ಳುವಾಗ ಶರಟುಗಳನ್ನು ರೈಲಿನವರೇ ಕೊಡುವರು., ಓದುವುದಕ್ಕೆ ~~ವರ್ತಮಾನ ಪತ್ರಿಕೆಗಳಲ್ಲದೆ~~ ರಷ್ಯಾದಲ್ಲಿ ಪ್ರಕಟವಾಗಿರುವ ಎಲ್ಲಾ ಪುಸ್ತಕಗಳನ್ನು ಶೇಕರಿಸಿ ರೈಲಿನಲ್ಲಿಟ್ಟಿರುವರು.

ರಷ್ಯಾದಲ್ಲಿ ಸಾಮಾನು ಸಾಗಿಸುವ ರೈಲು ಗಾಡಿಗೆ ದೊಡ್ಡ ನುರ್ಯಾದೆ. ಜನರು ಕೂತಿರುವ ಗಾಡಿಗಳನ್ನು ಒಂದು ಪಕ್ಕದಲ್ಲಿ ನಿಲ್ಲಿಸಿ ಸಾಮಾನಿನ ರೈಲನ್ನು ಮೊದಲು ರವಾನಿಸುವರು! ಸೈಬೀರಿಯಾದಲ್ಲಿ ಈಗ ಹತ್ತಿ ಗೋಧಿ ಬೆಳೆಯುತ್ತಾರೆ. ಹತ್ತು ವರ್ಷದ ಕೆಳಗೆ ಈ ಸೈಬೀರಿಯಾದಲ್ಲಿ ಹತ್ತಿ ಬೆಳೆಯುತ್ತಾರೇ ಎಂದು ಯಾರನ್ನಾದರು ಕೇಳಿದರೆ ಸೈಬೀರಿಯಾವು ವ್ಯವಸಾಯಕ್ಕೆ ಯೋಗ್ಯವಾದ ಪ್ರದೇಶವಲ್ಲವೆನ್ನುತ್ತಿದ್ದರು. ಈಗ ಸೈಬೀರಿಯಾಗಾಗಲಿ ಹೋಗುತ್ತಾಗೆ ನೋಡಿ ಇನ್ನು ಕೆಲವು ವರ್ಷದಲ್ಲಿ ಅತ್ಯಂತ ಎತ್ತರದಲ್ಲಿನ ಪೂನರಾಸನಲ್ಲಿ ಕೂಡ ಹತ್ತಿ, ಗೋಧಿಯನ್ನು ಬೆಳೆಯುತ್ತೇವೆ. ಈಗ ಇಲ್ಲಿನ ಹಳ್ಳಿ ಹಳ್ಳಿಯಲ್ಲಿಯೂ ವಿದ್ಯುಚ್ಛಕ್ತಿ ದೀಪಗಳು ವ್ಯವಸಾಯವೂ ಡಲು ಟ್ರಕ್ಕುಗಳು ಇವೆ. ರಾತ್ರಿಕಾಲದಲ್ಲಿ ಯಾವ ಹಳ್ಳಿಯೂ ದೀಪದಿಂದ ಬೆಳಗುತ್ತದೆ.

ಶ್ರೀ ಪರಶುರಾಂಹಾಲ್
ಪ್ರೊ॥ಧೆರಾಂಡೋಜಿರಾವ್
ಎಂಡ್ ಸನ್ಸ್
ಸಯ್ಯಾಜಿರಾವ್ ರೋಡು
ಮೈಸೂರು
ನಮ್ಮಲ್ಲಿ ಎಲ್ಲಾ ವಿಧದ ಬಟ್ಟೆಗಳೂ, ಕ್ವಲ್ಟ್‌ಗಳೂ, ಸುಲಭ ಬೆಲೆಗೆ ದೊರೆಯುತ್ತೆ. ಮತ್ತು ಹೊಲಿಗೆ ಕೆಲಸವು ನಿಮ್ಮ ಮನ ಒಪ್ಪುವಂತೆ ಅಂದವಾಗಿ [illegible]

ನಿನ್ನೆ ಜನರಲ್ ಡಿಗಾಲ್ ರವರು ಲಂಡನ್ನಿನಿಂದ ಪ್ರಯಾಣಮಾಡುತ್ತಾ —ಜನರಲ್ ಜೆರೋರವರು ಬಹಳ ಗಟ್ಟಿಗರೆಂದೂ, ಫ್ರೆಂಚರೆಲ್ಲರೂ ಒಂದಾಗಬೇಕೆಂದೂ, ಸ್ವೇನ್ನೆಲ್ಲಾ ಒಂದಾಗಿ ಕಾದಾಡಬೇಕೆಂದೂ ನೌಕಾಗಳೆಲ್ಲಾ ಒಟ್ಟಾಗಿ [illegible] ಒಡಿಯಬೇಕೆಂದೂ ತಿಳಿಸಿದರು.

ಪೊನ್ನೆ ತಾ॥ 25 ರಲ್ಲಿ [illegible] ಲಾದ ಭೂಕಂಪದಲ್ಲಿ [illegible] ಲ್ಲಾ ಮನೆಗಳೂ ನಾಶವಾಗಿ [illegible] ಮಾತ್ರ ಉಳಿದಿವೆ.

ಅಂಗ್ಲಾ ದೇಶದ ವಿಶ್ವವಿದ್ಯಾಲಯಗಳಲ್ಲಿ ಪ್ರಖ್ಯಾತವಾದದ್ದು ಆಕ್ಸ್‌ಫರ್ಡ್ ಈ ಹೆಸರಿಗೆ ಅರ್ಥವೇನೆಂದರೆ— ಎತ್ತು ದಾಟಲು ಸಾಧ್ಯವಾದುದು. ಭಾರತ ದೇಶದಲ್ಲಾದರೋ ಆಕ್ಸ್‌ಫರ್ಡ್ ವಿದ್ಯಾಲಯವು ಸಂಸ್ಥಾಪನೆಯಾಗುವುದಕ್ಕೆ ಪೂರ್ವದಲ್ಲಿಯೇ ಅನೇಕ ವಿಶ್ವವಿದ್ಯಾಲಯಗಳ ನೆಲೆಗೊಂಡಿದ್ದವು.

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟಸರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ನಿಮಗೆ ಶರೀರಸೌಖ್ಯ ಕಡಮೆ ಕಾರ್ಯಾಧಿಕ್ಯಕ್ಕೆ ಪ್ರಯತ್ನಮಾಡಿ ಖರ್ಚುಬಾಬಿಗೆ ಗುರಿಯಾಗುವಿರಿ. ಬಂಧು ಮಿತ್ರಾದಿ ಸಹಾಯ್ಯ ಉತ್ತಮ ಸಂಸ್ಥಾರಿ ಕಾರ್ಯದಲ್ಲಿ ನಿಗಾ ಇರಬೇಕು ಕಾರ್ಯಭಂಗ ಚಂಚಲತೆ ಉದಯಕಾಲ ನವಗ್ರಹ ದರ್ಶನ ಮಾಡಿ ತಾ|| 7-8 ಉತ್ತಮ ಫಲ.

ವೃಷಭ

ಈ ವಾರ ಹಿಂದಿನವಾರದಂತೆ ಸುಖವಿಲ್ಲ ಮನಸ್ಸು ನೆಮ್ಮದಿ ಕಡಿಮೆ, ರಾಜಕೀಕಾರ್ಯ ಸುಖ ಕಡಮೆ ಕಾರ್ಯಭಂಗ ವಿದ್ಯಾಭಂಗ ಅನಾರೋಗ್ಯ ಶತ್ರುವೃದ್ಧಿ ಶುಭಕಾರ್ಯ ನಿಧಾನತೆ ಉದಯಕಾಲ ಸಂಧಾದೀಪ ಇರಿಸಿ ಎಳ್ಳುದಾನ ಮಾಡಿ ತಾ|| 3-4 ಸ್ವಲ್ಪ ಅನುಕೂಲತೆ ಇರುತ್ತೆ.

ಮಿಥುನ

ನಿಮಗೆ ರಾಜಕೀ ಕಾರ್ಯ ದೇವತಾ ಗುರುಭಕ್ತಿ ಸತ್ಕಾರ್ಯ ಉತ್ತಮ ತಾ|| 7-8 ಕಾರ್ಯದಲ್ಲಿ ಸುಖವಿಲ್ಲ ಉಷಃಕಾಲ ಪೂಜೆಮಾಡಿಸಿ ಉತ್ತಮ ಫಲ,

ಕರ್ಕಾಟಕ

ಆದಾಯಕ್ಕಿಂತಲೂ ವ್ಯಯಾಧಿಕ ಸಂಚಾರಾಧಿಕ ಚಂಚಲತೆ ಗೃಹಕೃತ್ಯದಲ್ಲಿ ಅನಾರೋಗ್ಯ ಕಡಲೆ ತೊಗರೀಬೇಳೆ ದಾನ ಕೊಡಿ ಉತ್ತಮ ತಾ|| 7-8 ತಕ್ಕಮಟ್ಟಿಗೆ ಅನುಕೂಲ,

ಸಿಂಹ

ಚಂಚಲತೆ ಸರ್ಕಾರಿ ಕಾರ್ಯ ಮುಂದುವರಿಸುವಿಕೆ ಕಾರ್ಯಭಂಗ ಅನಾರೋಗ್ಯ ಬಂಧು ಜನ ಕ್ಲೇಶ ಗೋಧಿ ತೊಗರೀಬೇಳೆ ವಿರುತ್ತೆ.

ದಾನ ಕೊಡಿ ಉತ್ತಮ ತಾ|| 7-8 ಬಂಧು ಮಿತ್ರಾದಿ ಸಮಾಗಮ ಲಾಭಕಾರ್ಯ.

ಕನ್ಯಾ

ನಿಮಗೆ ಧನ ಧಾನ್ಯ ಶೇಖರ ಉತ್ತಮ ಸರ್ಕಾರಿ ಕಾರ್ಯ ಅನುಕೂಲತೆ ಶುಭ ವಾರ್ತಾ ಕಾರದಲ್ಲಿ ಉತ್ಸಾಹತೆ ಸ್ತ್ರೀ ಪುತ್ರಿ ಸೌಖ್ಯತೆ ತಾ|| 5-6 ಕಾರ್ಯ ನಿಧಾನತೆ ಜಂಚಲತೆ ಗೋ ಪೂಜೆಯಿಂದ ಅತ್ಯುತ್ತಮ ಫಲ.

ತುಲಾ

ಸುಖ ಕಡಮೆ ವ್ಯಯಾಧಿಕ ಗೃಹಕೃತ್ಯದಲ್ಲಿ ನಿಷ್ಠೂರ ಭಾಷಣ. ರಾಜಕೀ ಕಾರ್ಯದಲ್ಲಿ ಉತ್ತಮ ಫಲ. ಸ್ತ್ರೀ ಮೂಲ್ಕ ವಿರೋಧಫಲ. ಅನಾರೋಗ್ಯ ಉಷಃಕಾಲ ರುದ್ರಪೂಜೆ ಮಾಡಿಸಿ ತಾ|| 5-6 ಸುಖಾಧಿಕ್ಯ.

ವೃಶ್ಚಿಕ

ಅನುಕೂಲ ಕಡಿಮೆ ಮಿತ್ರರಲ್ಲಿ ನಿಷ್ಠೂರತ್ವ ಸರ್ಕಾರಿ ಕಾರ್ಯದಲ್ಲಿ ಎಚ್ಚರಿಕೆಯಿಂದ ಗವರ್ತಿಸಿರಿ ನವಗ್ರಹ ಸ್ತೋತ್ರ ಮಾಡಿ ಫಲ ಉತ್ತಮ ತಾ|| 7-8 ಉತ್ತಮ ಫಲ. ಮಿತ್ರಸಹಾಯ,

ಧನು

ನಿಮಗೆ ಕಾರ್ಯ ಉತ್ತಮವಾಗಿದ್ದರೂ ತಾಪತ್ರಯ ಇದ್ದೆ ಇದೆ ಚಂಚಲತೆ ವ್ಯಯಾಧಿಕ ರಾಜಕೀಕಾರ್ಯದಲ್ಲಿ ಚಿಂತಾಧಿಕ ಸೂರ್ಯ ನಮಸ್ಕಾರ ಶಿವ ಕೇಶವ ದರ್ಶನಪೂಡಿ ಸುಖ. ತಾ|| 5-6 ತಾಪತ್ರಯ ಕಡಿಮೆ.

ಮಕರ

ಬಂಧು ಮಿತ್ರಾದಿಗಳಿಂದ ಸುಖ ರಾಜಕೀ ಕಾರ್ಯದಲ್ಲಿ ಮಾನ್ಯತೆ ಗೃಹಕೃತ್ಯಾನುಕೂಲತೆ ತಾ|| 5-6 ದೇವತಾಗುರುಸೇವೆ ಮಾಡಿ ಪೂಜೆ ಮಾಡಿಸಿ ಫಲ ಉತ್ತಮ

ಕುಂಭ

ದೇವರಲ್ಲಿ ಭಕ್ತಿ ಹೆಚ್ಚಿಸಿ. ಈ ವಾರದಲ್ಲಿ ಉತ್ತಮ ಫಲ. ಮಂಗಳ ಕಾರ್ಯ ಅನುಕೂಲತೆ ಸರ್ಕಾರಿಕಾರ್ಯದಲ್ಲಿ ಮಾನ್ಯತೆ ಶತ್ರುಜನ ದೂರವಾಸನರು ತಾಪತ್ರಯ ನಿವಾರಣೆ. ತಾ 7 8 ಮಿತ್ರರ ಮೂಲಕ ವ್ಯಯಾಧಿಕ, ಸಂಚಾರಾಧಿಕ. ಉಷಃಕಾಲ ಅರ್ಚನೆ ಮಾಡಿಸಿ ಉತ್ತಮ ಫಲ.

ಮೀನ

ಉತ್ಸಾಹ, ಲಾಭಕಾರ್ಯ, ಜನರಲ್ಲಿ ಮಾನ್ಯತೆ, ಶತ್ರುಜನ ಬಲವಿಲ್ಲದೆ ದೂರವಾಗುವರು. ತಾ || 2 3 ವ್ಯಯಾಧಿಕ, ಕ್ಲೇಷ, ಉಷಃಕಾಲದಲ್ಲಿ ದೇವರಪೂಜೆಮಾಡಿಸಿ ಉತ್ತಮ ಫಲ.

ವಾರ್ತಾತರಂಗ

ದಕ್ಷಿಣ ಟುನಿಷಿಯಾಕ್ಕೆ ಜರ್ಮನಿಯರು ಹೆಚ್ಚು ಸೈನ್ಯ ತರುತ್ತಿರುವರು.

ಕಲಕತ್ತಾದಲ್ಲಿ ಝಾಡಮಾಲಿಗಳು ನಿನ್ನೆಯಿಂದ ಕೆಲಸಕ್ಕೆ ಹಾಜರಿರುತ್ತಾರೆ

ವೈಸ್ ಪ್ರೆಸಿಡೆಂಟ್ ವಾಲಿಸ್‌ರವರು ಅಟ್‌ಲಾಂಟಿಕ್ ಛಾರ್ಟರ್ ಪೂರ್ವ ದೇಶಕ್ಕೂ ಅನ್ವಯಿಸುತ್ತದೆ ಹಿಂದರು.

ಮಿಡ್‌ವೆಯಲ್ಲಿ 928 ಜಪಾನಿಯರ ವಿಮಾನ ನಷ್ಟದಲ್ಲಿ ಜರ್ಮನಿಯರದು 635 ಅಂದರೆ ಜಪಾನಿಯರು ಹೆಚ್ಚು ಹೆಚ್ಚಾಗಿ ವಿಮಾನ ತಯಾರು ಮಾಡಲು ತಕ್ಕಿಯಿಲ್ಲವೆಂದರ್ಥವಾಯಿತು.

ಮಾ|| ರೂಸವೆಲ್ಟರ್ ಪ್ರತಿನಿಧಿ ವಿ|| ಹಿಲಪ್ಕಿನ್ಸರು ಸಧ್ಯದಲ್ಲೆ ಢೇಲ್ಲಿಗೆ ಬರುವರು.

ಲಂಡನ್‌ನಲ್ಲಿರುವ ಇಂಡಿಯಾ ಹೈ ಕಮಿಷನರ್ ಸರ್ ಅಜೀಜುದ್ದೀನ್‌ರವರ ಮೊನ್ನೆ ಮಾತನಾಡುತ್ತಾ ಹೀಗೆಂದರು. ಜಪಾನಿಯರು ಇಂಡಿಯಾದಲ್ಲಿ ವಿಶೇಷವಾಗಿ ವ್ಯಾಪಾರ ಮಾಡುತ್ತಿದ್ದು ಹಣ ಸಂಪಾದನೆ ಮಾಡಿ ಇಂಡಿಯಾಕ್ಕೇ ಧಾಳಿ ಮಾಡುತ್ತಿರುವರು.

ವಿವಿಧ ವರ್ತಮಾನ

ಮುಖ್ಯವಾದ ನಾಲ್ಕು ಜಪಾನ್ ಬ್ಯಾಂಕುಗಳು ಜುಲೈನಿಂದ ಒಟ್ಟುಕೂಡಿ ಕೆಲಸ ಮಾಡುವುವು.

ಅಮೇರಿಕಾ ಸೈನ್ಯದಲ್ಲಿ ನಿಗ್ರೋ ಜನರು ಶೇಕಡ ಹತ್ತರಿಂತೆ ಇರುತ್ತಾರೆ.

ಜನವರಿ 14 ರಿಂದ ಅಮೇರಿಕಾದಲ್ಲಿ (ಸಂಯುಕ್ತ ಸಂಸ್ಥಾನದ) ಒಂದು ಹೊಸ ಅಂಚೆ ಚೀಟಿಯನ್ನು ಆಚರಣೆಗೆ ತರುವರು. ಇದರಲ್ಲಿ ಪುತ್ರರಾಷ್ಟ್ರದವರಿಗೆ ಜಯ ಎಂದಿರುವುದು.

ಪ್ಯಾರಿಸ್‌ನಗರದಿಂದ ಹತ್ತುಲಕ್ಷ ಜನರನ್ನು ಡ್ಯಾನ್ಸಿಸಿ ಜೀರೆಜೀರೆ ಭಾಗಕ್ಕೆ ಕಳಿಸುವರು. ಇವರಲ್ಲಿ ಪೊದಲು, ಕೆಂಸವಿಲ್ಲದವರು. ಆಮೇಲೆ ಹೆಂಗಸರು ಮತ್ತು ಮಕ್ಕಳು.

ಡಕ್ಕೆ ಮೇಜಿಸ್ಟ್ರೇಟರು ಅಲ್ಲಿ ಯಾವ ಪೇಪರ್ ವರ್ತಕರು ತಮ್ಮಲ್ಲಿರತಕ್ಕ ಕಾಗದವನ್ನು ಯಾರಿಗೂ ಎರಡು ಗಜಕಿಂತ ಹೆಚ್ಚಾಗಿ ಮಾರಕೂಡದೆಂದು ಆಜ್ಞೆ ಕೊಟ್ಟಿರುತ್ತಾರೆ.

ಷೋಲಾಪುರದಲ್ಲಿ ಒಬ್ಬ ವ್ಯಾಪಾರಿಯು ಐದು ರೂಪಾಯಿನ ನೋಟಿಗೆ ಚಿಲ್ಲರೆ ಕೊಟ್ಟ ಆದಕ್ಕೆ ಮೂರಾಣೆ ಕಮೀಷನ್ ತೆಗೆದುಕೊಂಡನೆಂದು 500 ರೂಪಾಯಿ ಜುಲ್ಮಾನೆಯಾಯಿತು.

ಮಿತ್ರ ಸೈನ್ಯಗಳು ಮೆಡ್‌ಜೆಜ್-ಎಲ್ ಬಾಬ್‌ನಲ್ಲಿ ಸ್ವಲ್ಪ ಹಿಂದಕ್ಕೆ ಸರಿದಿದೆ.

M L M S & S
ಮಂಗಳೂರು ಸುವರ್ಣ
ಸ್ಪೆಷಲ್ ಬೀಡಿಯನ್ನೇ
ಉಪಯೋಗಿಸಿ. ಒಳ್ಳೇ ಸಿಪ್ಪಾನಿ ಹೊಗೇ ಸೊಪ್ಪಿನಿಂದ ತಯಾರಿಸಿರುತ್ತೆ. ಒಂದಾವರ್ತಿ ಪರೀಕ್ಷಿಸಿ ನೋಡಿ.
ಮೈಸೂರು ಏಜೆಂಟರು, ಪಿ ಮುಂಜಪ್ಪ
ಬೇರೆ ಸ್ಥಳಗಳಿಗೆ ಏಜೆಂಟರು ಬೇಕು

ಶಕ್ತಿ ಸಾಧನೆಗೆ ಸುಲಭೋಪಾಯವು
ಶಕ್ತಿ ಸುಧಾ
ಸೇವನೆಯೆಂದು ನಿಮ್ಮ ಸೇನಪಿನಲ್ಲಿರಲಿ

"ಪ್ಯಾರಿಸ್ ಪತನ" ಪುಸ್ತಕಕ್ಕೆ ಮೆಡಲು ದೊರೆಯಿತು

ಇಂಗ್ಲೆಂಡಿನಲ್ಲಿ ಒಬ್ಬ ರಷ್ಯನು "ಪ್ಯಾರಿಸ್ ಪತನ" ಎಂಬ ಪುಸ್ತಕವನ್ನು ಪ್ರಕಟಿಸಿದನು. ಮಧ್ಯಾಹ್ನದೊಳಗಾಗಿ ಪುಸ್ತಕವೆಲ್ಲವೂ ಯಾವ ಅಂಗಡಿಯಲ್ಲೂ ಸಿಗಲಿಲ್ಲ, ಈ ಪುಸ್ತಕವು ರಷ್ಯಾ ಭಾಷೆಯಲ್ಲಿ ಒದೆದದ್ದಕ್ಕೆ "ಸ್ಟಾಲಿನ್ ಮೆಡಲು" ಬಹುಮಾನ ಬಂದಿರುತ್ತೆ. ರಷ್ಯಾ ಭಾಷೆಯ ಪುಸ್ತಕವು ಬರೆದು ಕೆಲವು ತಿಂಗಳ್ಳಾದಾಗ್ಯೂ ಇಂಗ್ಲೆಂಡಿನಲ್ಲಿ ಕೊಂಡಿದ್ದು ಸ್ವಲ್ಪ ದಿವಸದ ಹಿಂದೆ.

ಹಿಂದೂಸ್ಥಾನದ ವಿಷಯದಲ್ಲಿ ಸಂಭಾಷಣೆ.

ಅಮೇರಿಕಾದ ನಿಗ್ರೋ ಜನರ ಮುಖ್ಯಸ್ಥನು ಲಾರ್ಡ್ ಹಾಲಿಫಾಕ್ಸ್‌ಗೆ ಕಾಗದ ಒರೆದು ಯುದ್ಧ ಮುಗಿದನಂತರ ಹಿಂದುಸ್ಥಾನದ ವಿಷಯದಲ್ಲಿ ನಿಮ್ಮ ಆಶಯವೇನು? ಎಂದು ಬರೆಯಲು ಲಾರ್ಡರು ಕಾಗದ ಬರೆಯದೆ ಅತನನ್ನು ಖುದ್ದಾಗಿ ನೋಡಿದರಂತೆ. ಸಂಭಾಷಣೆ ಏನು ಎಂಬುದು ಇನ್ನೂ ಹೊರಬಟ್ಟಿಲ್ಲ.

ಇಟಲಿಯ ಜನರ ಗಡಿಬಿಡಿ!.

ಇಟಲಿಯವರ ಕಷ್ಟ ಹೇಳತೀರದು. ಪ್ರತಿದಿವಸವೂ ನಿತ್ಯಪಕ್ಷದವರು ಟೂರಿನ್, ನೇಪಲ್ಸ್ ಮುಂತಾದ ಇಟಲಿ ಪಟ್ಟಣಗಳ ಮೇಲೆ ಬಾಂಬ್ ಸುರುಮಳೆ ಮಾಡುವರು. ಆ ನಗರಗಳ ಜನರು ದಿಕ್ಕಾಪಾಲಾಗಿ, ಕಾಡುಗಳಿಗೂ ಹಳ್ಳಿಗಳಿಗೂ ಓಡುತ್ತಿರುವರು. ಇಟಲಿಯವರು ಅಬಿಸೀನಿಯಾದಲ್ಲಿ ವಿಷ ಪ್ರಯೋಗಿಸಿದರು. ಬಾಂಬು ಗೊತ್ತುಗುರಿಯಿಲ್ಲದೆ ಹಾಕಿ ಸಾವಿರಾರು ಪ್ರಜೆಗಳನ್ನು ಕೊಂದರು. ರಷ್ಯಾದಲ್ಲಿದ್ದ ತಮ್ಮ ವಿಮಾನಗಳನ್ನೆಲ್ಲಾ ಇಟಲಿಗೆ ತಂದಿರುತ್ತಾರೆ. ಮಾಡಿದ್ದೆಲ್ಲಾ ಮಹಾಪಾಪವು ಎಂಬ ಗಾದೆಯಂತಾಗಿದೆ.

ಸತ್ಯವಾಣಿ

ಎಳು ನೂರು ವರ್ಷಗಳ ಹಿಂದೆ ರಷ್ಯಾದ ಅಲೆಗ್ಜಾಂಡರ್ ನೆವೆಸ್ಕಿಯು ಜರ್ಮನಿಯವರಿಗೆ "ಅತಿಥಿಗಳಾಗಿ ಯಾರಾದರೂ ಒಬ್ಬಿಬ್ಬರು ಉದರೆ ಕತ್ತಿ ಹಿಡಿದು ಒಂದವರು ಹಿಂದಕ್ಕೆ ಹೋಗಲಾರರು" ಎಂ ಹೇಳಿದ್ದನು.

ಜ॥ ಟ್ರಾಟ್ಸ್ಕಿಯವರನ್ನು ಕೊಲೆ ಮಾಡಿದ್ದಕ್ಕೆ ಶೂಲಕ್ಕೇರಿಸಿದರು

ಜನರಲ್ ಡಾಲರ್ಟಾನನ್ನು ಕೊಂದ ಇಪ್ಪತ್ತು ವರ್ಷದ ಫ್ರೆಂಚ್ ಯುವಕನನ್ನು ಶೂಲಕ್ಕೇರಿಸಿದರು. ಇವನ ತಾಯಿ ಇಟ್ಟಲಿಯವಳು.

ಕಲ್ಕತ್ತಾಡಲ್ಲಿ 5 ನೇ ಧಾಳಿ

ನಿನ್ನೆ ಸೋಮವಾರ ಪ್ರಾತಃಕಾಲ ನಾಲ್ಕು ಘಂಟೆಯಲ್ಲಿ ಜಪಾನಿ ವಿಮಾನದವು ಕಲಕತ್ತಾ ಮೇಲೂ ಮತ್ತೊಂದು ದಳವು ಪೂರ್ವ ಬಂಗಾಳಾ ವೆಲೂ ಧಾಳಿ ಮಾಡಿದವು. ಕಲಕತ್ತಾದಲ್ಲಿ ಸಾವು ಹಕ್ಕಕ್ಕೆ ನಿಯಾರಿಲ್ಲ. ನಷ್ಟ ಅಲ್ಪ. ಒಂದು ಕಡೆ ಬೆಂಕಿ ಕಾಣಿಸಿಕೊಂಡಿತು. ತತ್‌ಕ್ಷಣ ಅದನ್ನು ಎ. ಆರ್. ಪಿ ಯವರು ಆರಿಸಿದರು.

ಭಕ್ತಕಬೀರ್ ಚಿತ್ರಕ್ಕೆ ಟ್ಯಾಕ್ಸ್ ಮಜಾ ಮಾಡಲಾಯಿತು

"ಭಕ್ತಕಬೀರ್" ಚಿತ್ರವು ರಾಷ್ಟ್ರೀಯ ಐಕ್ಯತೆ ಮತ್ತು ಸಹೋದರಾತ್ಮನನ್ನು ಜೋಧಿಸುವ ಆಶೋಕ ಸಂದೇಶದಿಂದ ಕೂಡಿರುವುದರಿಂದ ಅದಕ್ಕೆ ಸಾಫ್ಯವಾದ ಷ್ಟು ಪ್ರೋತ್ಸಾಹ ಮತ್ತು ಸಹಾಯ ಮಾಡಬೇಕಾದುದು ನ್ಯಾಯವಾಗಿರುವುದೆಂದು, ಬೊಂಬಾಯಿ ಸರಕಾರವು ಆ ಚಿತ್ರಕ್ಕೆ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಮನ್ನಾ ಮಾಡಿದ್ದಾರೆ.

ಹಣ್ಣಿನ ಬೀಜಗಳ ಮೇಲೆ ನಾಜಿಗಳ ಪ್ರತಿಬಂಧಕ

ಬೊಹಮಿಯ ಯೂರೋಪಿಯಗಳಲ್ಲಿ ಎಲ್ಲಾ ಹಣ್ಣುಗಳ ಬೀಜಗಳನ್ನು ಶೇಖರಿಸಿ ಸರ್ಕಾರಕ್ಕೆ ಕೊಡಿಸಿ ಕೆಂದು ನಾಜಿಗಳು ಆಜ್ಞೆ ಮಾಡಿರುವರು. ಕಾರಣವೇನೆಂದರೆ ಆ ಬೀಜಗಳಿಂದ ಎಣ್ಣೆಯನ್ನು ತೆಗೆದು ಉಪಯೋಗಿಸಿಕೊಳ್ಳುವದಕ್ಕಾಗಿ. ಎಣ್ಣೆಯ ಅಭಾವವು ಜರ್ಮನಿ ಆಕ್ರಮಿತ ಸ್ಥಾನಗಳಲಿಯೂ ಇದ್ದೇ ಇದೆಯೆಂಬುದು ಸಿದ್ಧವಾಗುವುದು.

ಜರ್ಮನ ರೇಡಿಯೋ ಹೇಳಿಕೆ ಶುದ್ಧ ಸುಳ್ಳು

ಮಿ॥ ಅಂಥೋನಿ ಈಡನ್ ಮಾಸ್ಕೋಗೆ ಏಕೆ ಹೋಗಿರುವುದಾಗಿ ಜರ್ಮನ್ ರೇಡಿಯೋ ಹೇಳಿರುವುದು ಶುದ್ಧ ಸುಳ್ಳೆಂದು ಲಂಡನ್ನಿನ ಸರಕಾರಿ ಪ್ರಕಟಣೆ.

ತತ್ವವಿರೋಧ ಚಳವಳಿಯೇ?

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ಲಿನ ವೈಸ್-ಪ್ರೆಸಿಡೆಂಟರ ಚುನಾವಣೆಯು ಅಲ್ಲಿಯ ಕಾಂಗ್ರೆಸ್ ಪಾರ್ಟಿಯಲ್ಲಿ ಸ್ವಲ್ಪ "ತತ್ವ" ವಿರೋಧ ಚಳವಳಿ ಹುಟ್ಟಿಕೊಂಡಿದೆ ಈಗಾಗಲೇ ಮೂರು ಮಂದಿ ಪೌರಸಭಾ ಕಾಂಗ್ರೆಸ್ ಪಾರ್ಟಿಗೆ ರಾಜೀನಾಮೆ ಕಳುಹಿಸಿರುವುದಾಗಿಯೂ, ಆ ಲ್ಲಿ ಅಂಗೀಕಾರವಾದ ಮೇಲೆ ಪೌರಸಭೆಯ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವೆದಾಗಿಯೂ ತಿಳಿಯಬರುತ್ತೆ. ಮತ್ತೆ ಇವರು ಸ್ವತಂತ್ರರಾಗಿ ಸಭಾ ಮೆಂಬರಾಗಿ ಈಗಿನಂತೆಯೇ ಇರಬಹುದೇ ಅಥವಾ ಒಂದು ಹೊಸ ಪಾರ್ಟಿ ಉದ್ಭವಿಸುವುದೋ ನೋಡೋಣ.

(ಪುಂಸಿವಾಸ್ತ್ರ)

ವಿದೇಶ ಪಿಂದೂದೇಶ

ರಷ್ಯಾಸೇನೆಗಳು ಯುಕರೇನ್ ಪ್ರಾಂತ್ಯವನ್ನು ಸೇರಿದವು.

ಅಮೇರಿಕಾದಲ್ಲಿ ಈ ವರ್ಷ 12000 ಹಡಗುಗಳು ರಿಪೇರಿ ಮಾಡಲ್ಪಟ್ಟಿವೆ.

ಸಾಲಮನ್ ದ್ವೀಪದಲ್ಲಿ ಜಪಾನರು ಪ್ಯಾರಾಚೂಟ್ ಸೈನ್ಯವನ್ನು ಇಳಿಸುತ್ತಿರುವರು.

ಉತ್ತರ ಆಫ್ರಿಕಾದಲ್ಲಿ ಡಾಲರ್ಟನ್ನರ ಸ್ಥಾನಕ್ಕೆ ಗಿರೋಡರು ನಿಯಮಿಸಲ್ಪಟ್ಟಿದ್ದಾರೆ.

ಟುನಿಷಿಯಾದಲ್ಲಿ ಒಂದೇ ಪ್ರಕಾರವಾಗಿ ಮಳೆಯು ಸುರಿಯುತ್ತಿದೆ. ಕೆಲಸ ಕಾರ್ಯಗಳಿಗೆ ಅಡಚಣೆಯಾಗಿರುವುದು.

ಲಂಡನ್ನಿನಲ್ಲಿ ಇನ್ನು ಮುಂದೆ ರೈಲ್ವೆ ಗಾಡಿಗಳಿಗೆಲ್ಲಾ ಕಪ್ಪು ಬಣ್ಣ ಬಳಿಯುವರು. ಶತ್ರುಗಳಿಗೆ ರಾತ್ರಿ ವೇಳೆ ಗೊತ್ತಾಗದಿರಲೆಂದು.

"ನಿಜವಾದ ಯುದ್ಧ ಈಗತಾನೇ ಪ್ರಾರಂಭವಾಗಿದೆ" ಎಂದು ಜಪಾನ್ ಮುಖ್ಯ ಮಂತ್ರಿಯು ಟೋಕಿಯೋದಲ್ಲಿ ಹೇಳಿರುವನು.

ಜಪಾನಿನವರು ವಿಶೇಷವಾಗಿ ಯುದ್ಧ ಸನ್ನಿಧಾನವನ್ನು ಬರ್ಮಾದಲ್ಲಿ ಮಾಡಿಕೊಳ್ಳುತ್ತಿರುವರು, ವಿಮಾನಸಿಲ್ವಾಣವನ್ನು ಒಲಸಡಿಸಿಕೊಳ್ಳುತ್ತಿರುವರು.

ಮೆಡಿಟರೇನಿಯನ್ ಸಮುದ್ರದಲ್ಲಿ ಮಿತ್ರರಾಷ್ಟ್ರದವರೇ ತಮಗಿಂತ ಹೆಚ್ಚು ಒಲಕಾಲಿಗಳ್ಳಾಗಿರುವರೆಂದು ಇಟಾಲಿಯನ್ನರು ಒಪ್ಪಿಕೊಂಡಿರುವರು.

1812 ರಲ್ಲಿ ನೆಪೋಲಿಯನ್ನನು ರಷ್ಯಾ ಮೇಲೆ ದಂಡೆಯಾತ್ರೆ ನಡೆಸಿ ಮಾಸ್ಕೋ ನಗರದ ಸಮೀಪಕ್ಕೆ ಬಂದನು. ರಷ್ಯನರು ಮಾಸ್ಕೋ ನಗರವನ್ನು ಸುಟ್ಟರು. ನೆಪೋಲಿಯನ್ ಮಾಸ್ಕೋ ನಗರದಲ್ಲಿ ಐದು ವಾರ ಇದ್ದನು. ರಾಜಿ ಮಾಡಿಕೊಳ್ಳಲು ರಷ್ಯನರು ಒರಲೇ ಇಲ್ಲ ಸಾಕುಸಾಕಾಗಿ ನೆಪೋಲಿಯನ್ ಹಿಂತಿರುಗಬೇಕಾಯಿತು. 1813 ರಲ್ಲಿ ರಷ್ಯನರು ಪ್ಯಾರಿಸ್ ನಗರದ ಹತ್ತಿರ ಕೂಡ ಹೋಗಿದ್ದರು.

ಹಿಟ್ಲರಿನ ಅಧಃಪತನವನ್ನು ಕುರಿತು ಡಗ್ಲಾಸನು ಒಂದು ಚಿಕ್ಕ ನಾಟಕ ಬರೆದಿರುವನು. ಆತನು ಸುತ್ತ ಕಾವಲು ಚೆನ್ನಾಗಿರುವುದರಿಂದ ಕೊಲ್ಲಲ್ಪಡಲಾರನೆಂದಿರುವನು, ರಣರಂಗದಲ್ಲಿ ಸಾಯಲಾರನೆಂಬೂ ವಿಚಾರಣೆ ಮತ್ತು ಶಿಕ್ಷೆಗೆ ಒಪ್ಪಿಸಲ್ಪಡಲಾರನೆಂದೂ ಹೇಳಿ ವನು. ಕಡೆಗೆ ಮುದಿದೆ ವೇಷಧಾರಿಯಾಗಿ ಎಲ್ಲೋ ಮಾಯವಾಗಿ ಸುದ್ದಿ ಕೊಂಡು ಜೀವನ ಮಾಡುವನೆಂದು ಊಹಿಸಲಾಗಿದೆ.

ನ್ಯೂಗಾಂಗಿನಲ್ಲಿ ಮೂರು ಹೈಸ್ಕೂಲುಗಳು ಸುಡಲ್ಪಟ್ಟವು.

ಅಪಘಾನಿಸ್ತಾನದಲ್ಲಿ ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು.

ಬೊಂಬಾಯಿನ ಒಂದು ಜೈನ ಹೋಟಲಿನ ಮೇಲೆ ಯಾರೋ ಬಾಂಬು ಎಸೆದರು. ಅಪಾಯವೇನೂ ಸಂಭವಿಸಲಿಲ್ಲ

ಬೆಂಗಳೂರಿಗೆ ಬೊಂಬಾಯಿನ ಪ್ರಸಿದ್ಧ ಸಿನಿಮಾ ತಯಾರಕರಾದ ಶ್ರೀ ಆರ್ ಸಿನಿಮಾ ತಾರೆ ವಸಂತಮಾಲಾ ಮತ್ತು ಡೈರೆಕ್ಟರ್ ನಾಗಭೂಷಣರವರು ಬಂದಿರುವ

ಕರಾಚಿಯಲ್ಲಿರುವ ಅಮೇರಿಕಾಧಿಕಾರಿಗಳು, ಕ್ರಿಸ್‌ಮಸ್ಸನ್ನು ಆಚರಿಸಿ, ಪೋಲಿಷ್ ನಿರಾಶ್ರಿತ ಮಕ್ಕಳಿಗಾಗಿ ಹಿಂದೂಸ್ಥಾನದ ಮಕ್ಕಳಿಗೂ ಬಟ್ಟೆಗಳನ್ನು ಹಂಚಿದ್ದಾರೆ.

ಸೂರ್ಯಾಸ್ತಮಾನವಾದ ಮೇಲೆ ಕಲ್ಕತ್ತಾದ ಸೀಲ್ದಾ ರೈಲ್ವೆ ಸ್ಟೇಷನ್ನಿನ ಬಂಗಾಳಾ ಅಸ್ಸಾಂ ರೈಲ್ವೆಯವರು ಟಿಕೆಟ್ಟುಗಳನ್ನು ಹೊಂದಿರುವಂತಹವರು ಮತ್ರ ಸ್ಟೇಷನ್ನಿಗೆ ಪ್ರವೇಶಿಸುವಂತೆ ಪ್ರತಿಬಂಧಿಸಿದ್ದಾರೆ.

ಇಂಡಿಯಾದಲ್ಲಿ ವರ್ತಮಾನಪತ್ರಿಕೆಗಳಿಗೆ ಈಗ ಬಹಳ ಕಷ್ಟಕಾಲ. ಅವು ತಿಂಗಳಿಗೆ ಕೊಡುತ್ತೇವೆಂದು ಹೇಳಿದ 9460 ಟನ್ ಕಾಗದಕ್ಕೆ ಒಂದು ಸಾವಿರ ಟನ್ ಕಾಗದ ಮಾತ್ರ ಇಂಡಿಯಾ ಬಂದಿದೆಯಂತೆ.

ಈಗ ಕಲ್ಕತ್ತಾದಲ್ಲಿ ನಡೆಯುವ ಅಖಿಲ ಇಂಡಿಯಾ ಸೈನ್ಸ್ ಕಾಂಗ್ರೆಸ್ಸಿಗೆ ಪಂಡಿತ ಜವಹರಲಾಲ್ ನೆಹ್ರೂರವರು ಪ್ರೆಸಿಡೆಂಟರಾಗಿ ಚುನಾಯಿತರಾಗಿದ್ದರು. ಇವರ ಅಡ್ರೆಸ್ಸನ್ನು ಓದಲು ಸರಕಾರದವರು ಅಪ್ಪಣೆ ಕೊಡಲಿಲ್ಲ

ಚಿದಂಬರದಲ್ಲಿ ಐದು ಮಂದಿ ವರ್ತಕರು ತಮ್ಮ ಅಂಗಡಿ ಮುಂದೆ ತಮ್ಮಲ್ಲಿ ವಸ್ತುಗಳ ಸ್ಟಾಕ್ ಮತ್ತು ಖರೀದಿ ಮಾಡಿದ ಬೋರ್ಡನ್ನು ಹಾಕಿದ್ದುದಕಾತಲಾರೂ ಐದು ಬುಲ್ಡಾನೆ ವಿಧಿಸಲಾಯಿತು. ವರ್ತಕರೊಬ್ಬ ಸಕರೆಯನ್ನು ಹೆಚ್ಚು ಖರೀದಿಗೆ ಮಾರಿದ್ದಕ್ಕಾಗಿ ರೂ 40 ಬುಲ್ಡಾನೆ ವಿಧಿಸಲಾಯಿತು.

ವಿಶಾಖಾ ಪಟ್ಟಣದ ಮೇಲೆ ಏಪ್ರಿಲ್ ೬ ನೆಯ ತಾರೀಖಿನ ದಿನ ಜಪಾನಿಯರು ದಾಳಿ ಮಾಡಿದಾಗಿನಿಂದ 27 ಜನ ಎ ರ್ಜನ್ಸಿ ದಳದ ಪೋಲೀಸರು ಯೋಗ್ಯ ರಣ ತೋರಿಸದೆ ಕೆಲಸ ತಪ್ಪಿಸಿರುವರೆಂ 50 ರೂ ಬುಲ್ಡಾನೆಯಿಂದ ಇರಡು ಗಳ ಸಾದಾ ಸಜೆಯನ್ನು ವಿಧಿಸಿದ್ದಾರೆ

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ಸಿರಪ್

ವ್ಯಾಪಾರದ ITL ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರದ ತೊಂದರೆ, ಹೊಟ್ಟೆ ಹಿಡಿತ, ಹಲ್ಲು ಬೆರುವಾಗ ಆಗುವ ತೊಂಡರೆ ಇತ್ಯಾದಿಗಳನ್ನು ನಿವಾರಿಸುತ್ತದೆ.

ಸೇವಿಸಲು ರುಚಿಕರ

ಮತ್ತು ಬರುವ ಮೂಲಿಕೆಗಳ ಮಿಶ್ರಣವಿಲ್ಲ

ಕ್ಷೇಮಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಡಸ್ಟ್ರಿಯಲ್ ಆಂಡ್ ಟೆಸ್ಟಿಂಗ್ ಲೆಬೊರೇಟರಿ

ಮಲ್ಲೇಶ್ವರಂ, ಬೆಂಗಳೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು,

TG. ಮಾರ್ಕಿನ ಹಿಂಗನ್ನು ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಸರಕುಗಳ ಆಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್ ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Marriage Gazette

The only illustrated monthly o urnal of its kind in India containing very interesting aud nstructive art. . s on matrimonia topics.

Apply....

The Indian Marriage Gazette
Bangalore City

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2-4-0

ಬಿಡಿ ಪ್ರತಿ 4 ಆಣೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಅಶೋಕಾ ರಸ್ತೆ — ಮೈಸೂರು

ಉತ್ತಮ ಕಾಫೀ !

ಸುವಾಸನೆ ! ಅತ್ಯಂತ ರುಚಿ

ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮೀನಾರಾಯಣ ಕಾಫೀವರ್ಕ್ಸ

ಕೊಳ್ಳೇಗಾಲ

ಚಲನಚಿತ್ರ ಪ್ರಪಂಚಕೆಲ್ಲಾ ಅಖಿಲ ಕರ್ನಾಟಕದ ಹೆಮ್ಮೆಯ ವಾರ್ತೆ

'ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್

ಗಾಂಧಿ ಸ್ಕ್ವೇರ್, ಮೈಸೂರು ಇವರ

ಸಂಗೀತರತ್ನ ಆಸ್ಥಾನ್ ವಿದ್ವಾನ್ ಟಿ. ಚೌಡಯ್ಯನವರು

ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯನವರು ಆಕ್ಟಿಸಿಯಿಸಿರುವ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಲನಚಿತ್ರ

ತಾರಾಗಣ—ಶ್ರೀಮತಿ ಬಳ್ಳಾರಿ ಲಲಿತ, ಟಿ. ಎಸ್. ಚಂದ್ರ, ಕುಮಾರಿ ರತ್ನ, ಪಂಡರೀಬಾಯಿ, ಧನಭಾಗ್ಯಂ, ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ, ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಹೆಚ್. ಆರ್. ಶಾಸ್ತ್ರಿ, ಎಂ. ಆರ್. ಪಿ. ಸಾರಥಿ, ಶ್ರೀಮತಿ ಕೆ. ಆರ್, ಶಾರದಾರಾಜಮ್ಮ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ ಎದುರು ನೋಡಿ

ನಿರ್ದೇಶಕರು—ಜಿ. ಆರ್. ರಾಮಯ್ಯನವರು, ಸಂಗೀತ ನಿರ್ದೇಶಕರು—ಸಂಗೀತರತ್ನ ಟಿ. ಚೌಡಯ್ಯನವರು, ತಯಾರಿಕೆ—ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು—ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.

ಹೆಚ್ಚಿನ ವಿವರಗಳಿಗಾಗಿ—ಜಿ. ಆರ್. ರಾಮಯ್ಯ, ಮ್ಯಾನೇಜಿಂಗ್ ಏಜೆಂಟ್ಸ್, ಇವರಲ್ಲಿ ತಿಳಿಯಿರಿ.